ಹಾಗೆ ಮಾಡದೇ ಹೋದರೆ ಎಸ್‌ಸಿ/ಎಸ್‌ಟಿ, ಹಿಂದುಳಿದವರಿಗೆ ಕೊಟ್ಟ ಸಬ್ಸಿಡಿ ದುರುಪಯೋಗವಾಗುತ್ತದೆ. ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ಸಮಾಜದ ಬಗ್ಗೆ ಅತ್ಯಂತ ಕಾಳಜಿ ಇದೆ. ಹಾಗೇ ಮಾನ್ಯ ಜಯಚಂದ್ರರೂ ಇದ್ದಾರೆ. ನಾವು ಕೊಟ್ಟ ಸವಲತ್ತುಗಳನ್ನು ಆ ಜನರು ಉಪಯೋಗಿಸುತ್ತಲೇ ಇಲ್ಲ. ಅವರಿಂದ ಕೊಳ್ಳುವವರ ಕ್ರಿಮಿನಲ್ ಕೇಸ್ ಹಾಕಬೇಕು. ಈಗ 'ಕೊಟ್ಟವನು ಕೋಡಂಗಿ, ಈಸ್ಕೊಂಡೋನು ಈರಭದ್ರ' ಎಂಬ ಪರಿಸ್ಥಿತಿಯಾಗಿದೆ. ದುರ್ಬಲರಿಗೆ ಕೊಟ್ಟ ಸೌಲಭ್ಯಗಳು ದುರುಪಯೋಗವಾಗುತ್ತಿರುವುದು ವಿಷಾದಕರ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹಾನಿಯಾಗುತ್ತಿದೆ. ಇದಕ್ಕೆ ಕಾನೂನು ತರಲೇಬೇಕಾಗುತ್ತದೆ, ಇಲ್ಲದಿದ್ದರೆ ರಾಜ್ಯ, ಕೇಂದ್ರ ಸರ್ಕಾರದ ಸಬ್ಸಿಡಿ ಹಣ ದುರುಪಯೋಗವಾಗುತ್ತದೆ. ಆದ್ದರಿಂದ ಈಗಾಗದಿದ್ದರೂ ಮುಂದಿನ ಜನವರಿಯಲ್ಲಾದರೂ ಈ ಬಗ್ಗೆ ಕಾನೂನು, ರೂಲ್ಸ್ ತರಲೇಬೇಕಾಗುತ್ತದೆ. ನಮ್ಮ ತಾಲೂಕಿನಲ್ಲೇ 15-20 ಲಕ್ಷ ಸಬ್ಸಿಡಿ ಕೊಡುತ್ತೇವೆ, ಅಷ್ಟು ಹಣದಿಂದ ಅಭಿವೃದ್ಧಿ ಕೆಲಸ ಮಾಡಲು ಆಗುವುದಿಲ್ಲ. ಇನ್ನೊಂದು ವಿಚಾರ ಹೇಳುತ್ತೇನೆ, ಪಕ್ಕದಲ್ಲಿ ಬಾವಿ ತೆಗೆದುಕೊಳ್ಳುತ್ತಾರೆ ಬೇರೆಯವರ ಕೈಲಿ ಹೊಡೆಸಿಕೊಳ್ಳುತ್ತಾರೆ. ಈ ಹಿನ್ನಲೆಯಲ್ಲಿ ಸಮಾಜ ಕಲ್ಯಾಣ ಸಚಿವರು ಒಂದು ಕಾನೂನು ತಂದರೆ ಅದು ಇತಿಹಾಸ ತೀರ್ಮಾನವಾಗುತ್ತದೆ. ಅದರಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದವರಿಗೆಲ್ಲ ಅನುಕೂಲವಾಗುತ್ತದೆ. ಈಗ ತಾವು ಈ ಬಗ್ಗೆ ಒಂದು ಹೇಳಿಕೆ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜಕಲ್ಯಾಣ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸಂಪೂರ್ಣ ಸತ್ಯವಿದೆ. ದುರ್ಬಲರಿಗೆ ಕೊಟ್ಟ ಸವಲತ್ತನ್ನು ಯಾವುದೇ ಕಾರಣಕ್ಕೂ ಪರಭಾರೆ ಮಾಡಬಾರದೆಂಬುದು ಸರ್ಕಾರದ ನೀತಿ. ಅದಕ್ಕೆ ಕಾನೂನಿನ ಅಗತ್ಯವಿದ್ದರೆ ಖಂಡಿತವಾಗಿ ನಾವು ಅದನ್ನು ಜಾರಿಗೆ ತರುತ್ತೇವೆ.

(viii) ರಾಜ್ಯದಲ್ಲಿನ ಶ್ರೀಗಂಧ ಕುಶಲಕರ್ಮಿಗಳ ಕುರಿತು.

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) :— ಮಾನ್ಯ ಅಧ್ಯಕ್ಷರೇ, ಈ ಅವಕಾಶ ಕೊಟ್ಟಿದ್ದಕ್ಕೆ ಮೊದಲನೆಯದಾಗಿ ನಾನು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದ ಶ್ರೀಗಂಧ ಕುಶಲಕರ್ಮಿಗಳು, ವಿಶೇಷವಾಗಿ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಯಾರಿದ್ದಾರೆ ಅವರು ಇದನ್ನು ಜೀವನದ ಕಸುಬನ್ನಾಗಿ ಮಾಡಿಕೊಂಡವರು ಬಹಳ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಸಾವಿರಾರು ಕುಟುಂಬಗಳು ವಂಶಪಾರಂಪರ್ಯವಾಗಿ ಇದನ್ನೇ ಮಾಡಿಕೊಂಡು ಬಂದಿವೆ. ಅವರ ಕುಟುಂಬಗಳೇ ಕೆತ್ತನೆಯ ಕೆಲಸದ ಮೇಲೆ ಅವಲಂಬಿಸಿವೆ. 1976ರಿಂದ ರಾಜ್ಯ ಸರ್ಕಾರ ಅವರಿಗೆ ಕೆತ್ತನೆಗೆ ಬೇಕಾದ ಗಂಧದ ತುಂಡುಗಳನ್ನು ಕೊಡುತ್ತಾ ಇತ್ತು. ಗಂಧದ ಮರ ಇರದಿದ್ದರೆ, ಶಿವನೇ, ತೇಗ ಅಥವಾ ಬೀಟೆ ಮರಗಳನ್ನಾದರೂ ಕೊಡುತ್ತಿತ್ತು. ಒಂದು ಕುಟುಂಬಕ್ಕೆ ತಿಂಗಳಿಗೆ ಒಂಬತ್ತೂವರೆ

ಕೆಜಿ ಗಂಧ ಕೊಡುತ್ತಿತ್ತು. ಮೆಷಿನ್‌ನಲ್ಲಿ ಕೆಲಸ ಮಾಡುವವರಿಗೆ 18 ಕೆ.ಜಿ. 100 ಗ್ರಾಂ ಗಂಧ ಕೊಡುತ್ತಿತ್ತು. ಆದರೆ ಬಹಳ ದುರಾದೃಷ್ಟಕರ ಸಂಗತಿಯೆಂದರೆ ಇದುವರೆಗೆ ಯಾವಾಗಲೂ ವರ್ಷಕ್ಕೆ ಅವರಿಗೆ ಕೊಡಬೇಕಾಗುತ್ತಿದ್ದ 108 ಕೆಜಿ ಆಗಲಿ, 216 ಕೆಜಿ ಆಗಲಿ ಒಂದು ಬಾರಿಯೂ ಕೊಟ್ಟಿಲ್ಲ. ಅವರಿಗೆ ಮೂರು ನಾಲ್ಕು ತಿಂಗಳಿಗೊಮ್ಮೆ 6, 7, 8 ಕೆಜಿ ಕೊಡುತ್ತಿದ್ದಾರೆ ಇದರಿಂದ ದುಷ್ಪರಿಣಾಮವೇನಾಗಿದೆ ಅಂದರೆ ಒಂದು, ಅವರ ಕುಟುಂಬ ನಿರ್ವಾಹಣೆಗೆ ಸಾಧ್ಯವಾಗುತ್ತಿಲ್ಲ. ಇದರ ಮೇಲೆ ಅವರ ಜೀವನ ಅವಲಂಭಿತವಾಗಿರುವುದು. ಹಾಗಾಗಿ ಅವರ ಮಕ್ಕಳುಗಳು ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದಾರೆ. ಈ ಸಮಸ್ಯೆಗಳು ಒಂದು ಕಡೆ ಇದೆ. ಇನ್ನೊಂದು ಸಮಸ್ಯೆ ಏನಾಗುತ್ತಿದೆ ಎಂದರೆ ಇವರಿಗೆ ಬೇರೆ ಇನ್ಯಾವುದೋ ಮಾರ್ಗದಿಂದ ಈ ಗಂಧದ ಮರಗಳನ್ನು ಕಡಿದು ಅದನ್ನು ತಂದು ಕದ್ದು ಮಾರುತ್ತಿರುವ ಸಂದರ್ಭವೂ ನಿರ್ಮಾಣವಾಗಿದೆ. ಏಕೆಂದರೆ ಇವರಿಗೆ ಅಗತ್ಯತೆ ಇದೆ. ಅಲ್ಲಿ ಕೆಲಸ ಮಾಡುವಂಥ ಕೈಗಳಿಗೆ ಕೆಲಸವಿಲ್ಲ. ಇನ್ಯಾರೋ ಜೀವನವನ್ನು ಮಾಡುವುದಕ್ಕೆ ಅಡ್ಡದಾರಿಯನ್ನು ಹಿಡಿದು ಕಳ್ಳತನವನ್ನು ಮಾಡಿ ಗಂಧವನ್ನು ತಂದು ಈ ಕುಶಲಕರ್ಮಿಗಳಿಗೆ ಕೊಡುತ್ತಿರುವ ಒಂದು ಸ್ಥಿತಿ ನಿರ್ಮಾಣವಾಗಿದೆ. ಸರ್ಕಾರದಲ್ಲಿ ಗಂಧ ಇರಲಿಲ್ಲ ಎಂದರೆ ಅವರಿಗೆ ಗಂಧವನ್ನು ಕೊಡಬೇಡಿ ಎಂದು ನಾನು ಹೇಳುತ್ತಿದ್ದೆ. ಈ ಹಿಂದೆ ನಾನೊಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಸಂಬಂಧಪಟ್ಟ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮಲ್ಲಿ 2,81,952 ಕೆ.ಜಿ ಗಂಧ ನ್ಯಾಯಾಲಯದಲ್ಲಿದೆ. ಅಂದರೆ ಅದು ಮೊಕದ್ದಮೆಗಳನ್ನು ಎದುರಿಸುತ್ತಿದೆ. ಅದು ಯಾವ ಯಾವ ಫಾರೆಸ್ಟ್ ಇಲಾಖೆಯ ಗೋಡೌನ್‌ಗಳಲ್ಲಿದೆಯೋ ಅಲ್ಲಿ ಲಡ್ಡಾಗಿ ಹೋಗುತ್ತಿದೆ. ಅಲ್ಲಿ ಒರಲೆಗಳು ತಿನ್ನುತ್ತಿದೆ. ಆದರೆ ಗಂಧದ ಮರದ ತುಂಡುಗಳನ್ನು ಕದ್ದುಕೊಂಡು ಹೋಗುತ್ತಿರುವ ದೃಶ್ಯವನ್ನು ಕಾಣುತ್ತಿದ್ದೇವೆ. ಹಾಗಾಗಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಮ್ಮ ಕಡೆ ಗಂಧದ ಸ್ಟಾಕ್ ಇರುವುದರಿಂದ ಈ ಸ್ಟಾಕನ್ನು ಉಪಯೋಗಿಸಿಕೊಂಡು ನಾವು ಇಂಥ ಕುಶಲಕರ್ಮಿಗಳಿಗೆ ರಿಲೀಸ್ ಮಾಡುವುದರಿಂದ ಅವರು ಹತ್ತು ವರ್ಷಗಳ ಕಾಲ ನೆಮ್ಮದಿಯ ಜೀವನವನ್ನು ಮಾಡಬಹುದು; ಅಷ್ಟು ಗಂಧ ನಮ್ಮ ಹತ್ತಿರವಿದೆ. ಹಾಗಾಗಿ ಕೋರ್ಟಿನಲ್ಲಿರುವುದನ್ನು ತಕ್ಷಣದಲ್ಲಿ ಇತ್ಯರ್ಥ ಮಾಡಿ ಈ ಕೇಸನ್ನು ನಡೆಸುವುದಕ್ಕೆ ಬೇಕಾದರೆ ಒಂದು ಗಂಧದ ಪೀಸನ್ನು ಸ್ಯಾಂಪಲ್ ಆಗಿ ಇಟ್ಟುಕೊಂಡು ಉಳಿದ ಪೀಸ್‌ಗಳನ್ನು ರಿಲೀಸ್ ಮಾಡಿಸಿ ಆ ಕೆಲಸಗಾರರಿಗೆ ಕೊಟ್ಟರೆ ಅವರ ಜೀವನವಾದರೂ ನಡೆಯುತ್ತದೆ. ಇಲ್ಲದಿದ್ದರೆ, ಕಳೆದ ವರ್ಷ ಅವರಿಗೆ ಹೊರ ರಾಜ್ಯಗಳಿಂದ ಗಂಧವನ್ನು ತರಿಸಿಕೊಟ್ಟು ಕೆಲಸ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿತ್ತು; ಆದೆ ಹೊರರಾಜ್ಯದ ಗಂಧವನ್ನು ತೆಗೆದುಕೊಂಡರೆ ಬಹಳ ದುಬಾರಿಯಾಗುತ್ತೆ. ನಮ್ಮ ರಾಜ್ಯ ಸರ್ಕಾರ ಕಳೆದ ಬಾರಿ ತೆಗೆದುಕೊಂಡಿತ್ತು. ಕೋರ್ಟಿನಲ್ಲಿ ಮೊಕದ್ದಮೆಗಳನ್ನು ಎದುರಿಸುತ್ತಿರುವ ಇಷ್ಟು ದೊಡ್ಡ ಪ್ರಮಾಣದಲ್ಲಿರುವ ಗಂಧವನ್ನು ರಿಲೀಸ್ ಮಾಡಿಸಿ ಆ ಕುಶಲಕರ್ಮಿಗಳಿಗೆ ಕೊಡಬೇಕು. ಅವರು ಈ ಬಗ್ಗೆ ಹೋರಾಟವನ್ನು

ಕೂಡ ಮಾಡಿದರು; ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆಯನ್ನು ಮಾಡಿದರು. ನಮ್ಮ ಜೀವನಕ್ಕೆ ಗಂಧ ಕೊಡಿ, ಇಲ್ಲದಿದ್ದರೆ ನಮಗೆ ವಿಷ ಕೊಡಿ ಎಂದು ಹೇಳಿದರು. ಅವರುಗಳು ವಿಷ ತೆಗೆದುಕೊಳ್ಳುವ ಸಂದರ್ಭ ಇದೆ. ಇದರ ಬಗ್ಗೆ ಅರಣ್ಯ ಇಲಾಖೆಯ ವಿಶೇಷವಾಗಿ ಗಮನ ಕೊಟ್ಟು ಅವರಿಗೆ ಬೇಕಾಗುವ ಗಂಧವನ್ನು ಒದಗಿಸಿಕೊಡಲು ಪ್ರಯತ್ನಿಸಬೇಕು. ಕಾವೇರಿ ಎಂಪೋರಿಯಂ ಕೂಡ ಇದರ ಮೇಲೆ ನಡೆಯುವಂಥಾದ್ದು. ಅಲ್ಲಿ ಯಾರು ಪ್ರವಾಸಿಗರು ಬರುತ್ತಿಲ್ಲ. ಅಲ್ಲಿರುವುದು ಖಾಲಿಯಾಗುತ್ತಿಲ್ಲ. ಈ ರೀತಿ ಪರಿಸ್ಥಿತಿಯಾಗಿದೆ. ಅರಣ್ಯ ಇಲಾಖೆ ವಿಶೇಷ ಮುತುವರ್ಜಿ ತೆಗೆದುಕೊಂಡು ಗಂಧವನ್ನು ರಿಲೀಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಮಾನ್ಯ ಅರಣ್ಯ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ, ಗಂಧ ನಮ್ಮಲ್ಲಿಲ್ಲ. ಅವರು ಕೋರ್ಟಿನಲ್ಲಿದೆ ಎಂದು ಹೇಳಿದರು. ಆ ಬಗ್ಗೆ ಅದು ಕೋರ್ಟಿನಲ್ಲಿ ತೀರ್ಮಾನವಾಗಬೇಕು. ಅವರು ಕೊಟ್ಟರೆ ಗಂಧ ಮಾತ್ರ ಕೊಡುತ್ತೇನೆ, ವಿಷ ಮಾತ್ರ ಕೊಡುವುದಿಲ್ಲ. ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ತಿಳಿದುಕೊಂಡಿದ್ದೇನೆ. ಅವರಿಗೆ ನಾನು ಸ್ಪಷ್ಟವಾಗಿ ಉತ್ತರವನ್ನು ಬರೆದು ತಿಳಿಸುತ್ತೇನೆ.

6. ಶಾಸನ ರಚನೆ

(i) ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕ, 2000 (ಮುಂದು)

+ ಪ್ರೊ: ಬಿ.ಕೆ. ಚಂದ್ರಶೇಖರ್ (ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೇ, ನಾನು ಬಹಳ ಸಂಕ್ಷಿಪ್ತವಾಗಿ ಈ ವಿಧೇಯಕದ ಬಗ್ಗೆ ಮೂರು-ನಾಲ್ಕು ಅಂಶಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಉಪಯೋಗಿಸಿಕೊಳ್ಳಬಹುದಾದ ಸಮಯವನ್ನು ಸನ್ಮಾನ್ಯ ಸದಸ್ಯರುಗಳು ಮಾತನಾಡುವುದಕ್ಕೆ ಉಪಯೋಗಿಸಿಕೊಂಡರೆ ನನಗೆ ಹೆಚ್ಚು ಅನುಕೂಲವಾಗುತ್ತದೆ ಎನ್ನುವ ನಂಬಿಕೆಯಿಂದ ಬಹಳ ಸಂಕ್ಷಿಪ್ತವಾಗಿ ಮೂರು-ನಾಲ್ಕು ಮಾತುಗಳನ್ನು ಹೇಳುತ್ತೇನೆ. ಮೊದಲನೆಯದಾಗಿ ನಮ್ಮ ಆಡಳಿತ ವ್ಯವಸ್ಥೆ ಬ್ರಿಟಿಷ್ ವಸಾಹತುಶಾಹಿಯಿಂದ ಬಂದ ಕಲ್ಪನೆಗಳಿಂದ ಕೂಡಿದ ಒಂದು ಆಡಳಿತ ವ್ಯವಸ್ಥೆ; ಕಲೋನಿಯಲ್ ಮೋಡ್ ಆಫ್ ಅಡ್ಮಿನಿಸ್ಟ್ರೇಷನ್ ನಮ್ಮಲ್ಲಿದೆ. ಅದರಿಂದಲೇ ರೂಪಗೊಂಡ ವ್ಯವಸ್ಥೆ ಇದು ಎಂದು ಹೇಳಿದರೆ ತಪ್ಪೇನಾಗುವುದಿಲ್ಲ. ಅದು ಉತ್ಪ್ರೇಕ್ಷೆಯಂತೂ ಖಂಡಿತಾ ಅಲ್ಲ. ಅಂಥ ವಸಾಹತುಶಾಹಿಯ ಒಂದು ಮಾದರಿ ಏನಿದೆ ಅದರ ಕೇಂದ್ರ ಬಿಂದು ಆಡಳಿತದಲ್ಲಿ ರಹಸ್ಯವನ್ನು ಕಾಪಾಡಿಕೊಳ್ಳಬೇಕೆನ್ನುವುದು ಅತ್ಯಂತ ಮುಖ್ಯವಾಗಿ, ಮೌಲಿಕವಾಗಿ ಮುಂದುವರಿದುಕೊಂಡು ಬಂದಿದೆ. ಅದಕ್ಕೆ ಕಾರಣ, ಈ ರಹಸ್ಯ ಅಗತ್ಯ ಎಂದು ಉಳಿಸಿಕೊಂಡು ಬಂದಿದ್ದಾರೆ, ಅದರ ಪರಿಣಾಮ ನಮಗೆ ಕಾಲಕ್ರಮೇಣ ಅರಿವಾಗಿದೆ. ರಹಸ್ಯದಿಂದ ಅತ್ಯಂತ ಮುಖ್ಯವಾಗಿ ಉತ್ತರದಾಯಿತ್ವ ಎನ್ನುವ